ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	101
ಸದಸ್ಯರ ಹೆಸರು	:	ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	22.09.2021
ಉತ್ತರಿಸುವ ಸಚಿವರು	:	ಮಾನ್ಯ ಲೋಕೋಪಯೋಗಿ ಸಚಿವರು

ಅ)	ಕಾರವಾರ ಜಿಲ್ಲೆಯ ಹಳಿಯಾಳ ತಾಲೂಕಿನ ದುಸಗಿ ಗ್ರಾಮದ ಬಳಿ ಇರುವ ನಾಲಾಗೆ ಕಳೆದ 20 ವರ್ಷಗಳಿಂದ ನಿರ್ಮಿಸಿದ ಸೇತುವೆ ಹಾಳಾಗಿದ್ದು, 2 ವರ್ಷಗಳ ಹಿಂದೆ ಉಂಟಾದ ಪ್ರವಾಹದಿಂದ ಅವೈಜ್ಞಾನಿಕ ಹಾಗೂ ಕಳಪೆ ಕಾಮಗಾರಿ ಕೈಗೊಂಡ ಪರಿಣಾಮ ಸೇತುವೆ ಸಂಪೂರ್ಣ ಹಾಳಾಗಿದ್ದು, ಈ ಮಾರ್ಗದಲ್ಲಿ ಓಡಾಡುವ ಸಾವಿರಾರು ವಾಹನಗಳಿಗೆ ತುಂಬಾ ತೊಂದರೆಯಾಗಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ; (ವಿವರ ನೀಡುವುದು)	ಕಾರವಾರ ಜಿಲ್ಲೆಯ ಹಳಿಯಾಳ ತಾಲೂಕಿನಲ್ಲಿ 2019ರಲ್ಲಿ ವಾಡಿಕೆ ಮಳೆಗಿಂತ (1328 ಮಿ.ಮಿ) ಹೆಚ್ಚುವರಿಯಾಗಿ ಭಾರಿ ಮಳೆಯಾಗಿದ್ದು, (1989.6 ಮಿ.ಮಿ.) (ಮಳೆ ವಿವರವನ್ನು ಅನೆಕ್ಸರ್-1 ರಲ್ಲಿ ಲಗತ್ತಿಸಿದೆ.) ಇದರಿಂದ ಉಂಟಾದ ಪ್ರವಾಹದ ರಭಸಕ್ಕೆ ಸೇತುವೆಯ ಒಂದು ಪಿಯರ್ ವಾಲಿರುವ ಹಿನ್ನೆಲೆಯಲ್ಲಿ ಸದರಿ ಸೇತುವೆಯ ಮೇಲಿನ ಸಂಚಾರವನ್ನು ಸ್ಥಗಿತಗೊಳಿಸಿ ಇದೇ ಸೇತುವೆಯ ಪಕ್ಕದಲ್ಲಿರುವ ಹಳೆಯ ಸೇತುವೆಯ ಮೇಲೆ ಬದಲಿ ರಸ್ತೆಯನ್ನು ನಿರ್ಮಿಸಿ ಸಂಚಾರಕ್ಕೆ ಅನುವು ಮಾಡಿ ಕೊಡಲಾಗಿತ್ತು. 2021 ನೇ ಸಾಲಿನ ಜುಲೈ 23 ರಂದು ಬಿದ್ದ ಭಾರಿ ಮಳೆಯಿಂದ ಹಳೆಯ ಸೇತುವೆಗೆ ನಿರ್ಮಿಸಿದ ಕಲ್ಲಿನ ರಿಟೇನಿಂಗ ವಾಲ್ ಕುಸಿದು ರಸ್ತೆ ಸಂಪರ್ಕ ಕಡಿತಗೊಂಡಿರುವುದರಿಂದ ಹಳೆಯ ಸೇತುವೆಯ ಮೇಲೆಯೂ ಸಹ ಸಂಚಾರವನ್ನು ನಿರ್ಭಂಧಿಸಲಾಗಿದೆ. ಹಳೆಯ ಸೇತುವೆಗೆ ಆರ್.ಸಿ.ಸಿ. ರಿಟೇನಿಂಗ್ ವಾಲ್ ಕಾಮಗಾರಿಯನ್ನು ಮಾಡಿ ಸಂಚಾರಕ್ಕೆ ಶೀಘ್ರವಾಗಿ ಅನುವು ಮಾಡಿಕೊಡಲು ಕ್ರಮ ಕೈಗೊಳ್ಳಲಾಗಿದ್ದು, ಪೂರ್ಣಗೊಳ್ಳುವ ಹಂತದಲ್ಲಿದೆ.
ಆ)	ಸದರಿ ಸೇತುವೆಯನ್ನು ದುರಸ್ತಿ ಪಡಿಸಲು ಲೋಕೋಪಯೋಗಿ ಇಲಾಖೆಯಿಂದ ಇಲ್ಲಿಯವರೆಗೆ ಬಿಡುಗಡೆಯಾದ ಹಣವೆಷ್ಟು? ಅದರ ಗುತ್ತಿಗೆದಾರರು ಯಾರು: ಯಾವ ಕಾರಣಕ್ಕಾಗಿ ಕಳಪೆ ಕಾಮಗಾರಿ ಮಾಡಿರುತ್ತಾರೆ. ಈ ಕುರಿತು ಸಂಬಂಧಿಸಿದ ಗುತ್ತಿಗೆದಾರರು ಅಧಿಕಾರಿಗಳು, ಅಕ್ರಮವೆಸಗಿ ಅನುದಾನ ದುರುಪಯೋಗ ಮಾಡಿಸಿಕೊಂಡ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿರುವ ಪ್ರಯುಕ್ತ ಸಾರ್ವಜನಿಕರ ಹಿತದೃಷ್ಟಿಯಿಂದ ಸರಕಾರ ಈ ಬಗ್ಗೆ ಸೂಕ್ತ ತನಿಖೆ ಮಾಡುವುದೇ: ಇದಕ್ಕೆ ಎಷ್ಟು ಕಾಲಾವಕಾಶ ಬೇಕಾಗುತ್ತದೆ? (ವಿವರ ನೀಡುವುದು)	ಹಾನಿಗೊಳಗಾಗಿರುವ ಸೇತುವೆಯ ದುರಸ್ತಿಗಾಗಿ ರೂ.20.00 ಲಕ್ಷ ಮಂಜೂರಾಗಿರುತ್ತದೆ. ಅದರಂತೆ ಸೇತುವೆ ದುರಸ್ತಿ ಪರಿಣಿತರು ನೀಡಿರುವ ವಿನ್ಯಾಸದನ್ವಯ ಅಂದಾಜು ಪತ್ರಿಕೆಯನ್ನು ತಯಾರಿಸಿ ಅನುಮೋದನೆ ಪಡೆದು ಗುತ್ತಿಗೆದಾರರಾದ ಶ್ರೀ ಬಿ.ಎನ್. ಕಾಮ್ರೇಕರ ಹಳಿಯಾಳ ರವರಿಗೆ ಗುತ್ತಿಗೆ ನೀಡಲಾಗಿದೆ. ಅಪ್ ಸ್ಟ್ರೀಮ್‌ನಲ್ಲಿ ಪಿಯರನ ಅಡಿಪಾಯದ ಕೆಳಗೆ ಮಣ್ಣು ಕೊರೆದು ಪಿಯರ್ ಒಂದು ಕಡೆ ವಾಲಿರುತ್ತದೆ. ಸೇತುವೆ ದುರಸ್ಥಿ ಪರಿಣಿತರು ನೀಡಿದ ಸಲಹೆಯಂತೆ ಪಿಯರನ್ನು ಸೇತುವೆ ಸ್ಲ್ಯಾಬ್‌ನಿಂದ ಮುಕ್ತಗೊಳಿಸಿ ವಾಲಿರುವ ಪಿಯರನ್ನು ಮೊದಲಿನ ಸ್ಥಿತಿಗೆ ತಂದು ಪುನ: ಸ್ಲ್ಯಾಬ್‌ನ್ನು ಪಿಯರ ಮೇಲೆ ಇಡುವ ತಂತ್ರಜ್ಞಾನದೊಂದಿಗೆ ಸೇತುವೆಯ ಬೀಮಿನ ಕೆಳಗಡೆ ಜಾಕನ್ನು ಅಳವಡಿಸಿ ಸೇತುವೆಯ ಸ್ಲ್ಯಾಬನ್ನು ಎತ್ತಿದಾಗ ಪಿಯರ ಒಂದು ಕಡೆ ವಾಲುತ್ತಿರುವುದರಿಂದ ಈ ಕಾರ್ಯವಿಧಾನದಿಂದ ಸೇತುವೆ ದುರಸ್ತಿ ಕಷ್ಟಸಾಧ್ಯ ಹಾಗೂ ಅಸುರಕ್ಷಿತವೆಂದು ಪರಿಣಿತರು ಸ್ಥಳ ಪರಿವೀಕ್ಷಣೆ ನಡೆಸಿ ತಿಳಿಸಿದ ಮೇರೆಗೆ ದುರಸ್ತಿ ಕಾಮಗಾರಿಯನ್ನು ಯಥಾಸ್ಥಿತಿಯಲ್ಲಿ ಸ್ಥಗಿತಗೊಳಿಸಲಾಗಿರುತ್ತದೆ. ಮುಂದುವರೆದು, ಇಲಾಖೆ ವತಿಯಿಂದ ವಿಶೇಷ ಕಾರ್ಯವಿಧಾನ ಬಳಸಿ ಸೇತುವೆಯನ್ನು ದುರಸ್ತಿಗೊಳಿಸುವ ಬಗ್ಗೆ ಪರಿಣಿತರಾದ ಶ್ರೀ ಆರ್.ಕೆ. ಜಯಗೋಪಾಲ Concrete

		Structural Forensic Consultants, Bangalore, ಇವರನ್ನು ಸಂಪರ್ಕಿಸಿದ್ದು, ಸದರಿಯವರು ಸ್ಥಳ ಪರಿವಿಕ್ಷಣೆ ಮಾಡಿ, ಸೇತುವೆ ದುರಸ್ತಿಗೆ ರೂ.80.00 ಲಕ್ಷಗಳ ಅಂದಾಜು ಪತ್ರಿಕೆ ಸಲ್ಲಿಸಿರುತ್ತಾರೆ. ಸದರಿ ಅಂದಾಜು ಪತ್ರಿಕೆಗೆ ತಾಂತ್ರಿಕ ಮಂಜೂರಾತಿ ಪಡೆದು ಟೆಂಡರ ಕರೆದು ಗುತ್ತಿಗೆದಾರರನ್ನು ನೇಮಿಸಿದ್ದು ಸೇತುವೆಯ ಅಡಿಪಾಯದಲ್ಲಿ ನೀರು ಕಡಿಮೆಯಾದ ತಕ್ಷಣ ಕಾಮಗಾರಿ ನಿರ್ವಹಿಸಿ ಸೇತುವೆಯನ್ನು ಸಂಚಾರಕ್ಕೆ ಅನುವು ಮಾಡಿ ಕೊಡಲಾಗುವುದು. ಸದರಿ ಕಾಮಗಾರಿಯಲ್ಲಿ ಯಾವುದೇ ಕಳಪೆ ಕಾಮಗಾರಿ ಆಗಿರುವುದಿಲ್ಲ ಹಾಗೂ ಅಕ್ರಮವೆಸಗಿ ಅನುದಾನದ ದುರುಪಯೋಗ ಪಡಿಸಿಕೊಂಡ ಬಗ್ಗೆ ಸಾರ್ವಜನಿಕರಿಂದ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.

ಸಂಖ್ಯೆ: ಲೋಇ 75 ಪಿಬಿಆರ್ 2021(ಇ)

(ಸಿ.ಸಿ.ಪಾಟೀಲ್)
ಲೋಕೋಪಯೋಗಿ ಸಚಿವರು,

ತಹಶೀಲದಾರ ಕಾರ್ಯಾಲಯ ಹಳಿಯಾಳ (ಉತ್ತರಕನ್ನಡ)–581329

OFFICE OF THE TAHASILDAR HALIYAL (U.K) 581329

ದೂರವಾಣಿ - 08284-220134

ಫ್ಯಾಕ್ಸ - 08284-220134 Email:tah.haliyal@gmail.com

ನಂ/ಎಸ್‌ಟಿಟಿ/ಜಮನೋ/ವಿವ:289/2019–20 ದಿನಾಂಕ:16/09/2021

ರಿಗೆ,
ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ,
ಉಪವಿಭಾಗ ಹಳಿಯಾಳ.

ಮಾನ್ಯರೇ,

ವಿಷಯ: 2019 ನೇ ಸಾಲಿನಲ್ಲಿ ಆದ ಮಳೆಯ ಮಾಹಿತಿ ಕುರಿತು.

ಉಲ್ಲೇಖ: ತಮ್ಮ ಕಾರ್ಯಾಲಯದ ಪತ್ರ ಸಂಖ್ಯೆ ನಂ:ಸಕಾನಿಇಂ:ಲೋ.ಇ:ಉವಿಹ:ಭಾರಿ ಮಳೆ/2021–22, ದಿ:16/09/2021

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಕೋರಿದ 2019 ನೇ ಸಾಲಿನ ಮಳೆ ಮಾಹಿತಿಯನ್ನು ಈ ಕೆಳಗಿನಂತೆ ನೀಡಿದೆ.

ವರ್ಷ	ಮಳೆ ಮಾಪನ ಕೇಂದ್ರ ಇರುವ ಸ್ಥಳ	ವಾಡಿಕೆ ಮಳೆ	2019 ನೇ ವರ್ಷದಲ್ಲಿ ಬಿದ್ದ ಮಳೆ
2019	ಹಳಿಯಾಳ	1328 ಮಿ.ಮೀ	1989.6 ಮಿ.ಮೀ

ತಮ್ಮ ವಿಶ್ವಾಸಿ
16/9
ತಹಶೀಲದಾರ ಹಳಿಯಾಳ